ಅಧ್ಯಕ್ಷರು.—ನಿಮಗೆ ಮಾತನಾಡಲು ೧೫–೨೦ ನಿಮಿಷಗಳಷ್ಟು ಹೆಚ್ಚು ಕಾಲವಕಾಶ ಕೊಟ್ಟಿದ್ದೇನೆ. ನಾನು ಬೇರೆಯವರಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಆದ್ದರಿಂದ ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅವರ ಪ್ರಚೋದನೆಗೆ ಸರ್ಕಾರದವರೇ ಕಾರಣವೆಂದು ಕಾಣುತ್ತಿದೆ ನನ್ನ ಭಾಷಣಕ್ಕೆ ಅವರು ಈ ರೀತಿ ಅಡ್ಡಿಪಡಿಸುವುದಾದರೆ ನಾನು ನನ್ನ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ, ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ನಾನೂ ನನ್ನ ಭಾಷಣವನ್ನು ಮುಂದುವರೆಸುವುದಿಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ.—ನೀವು ನಮಗೆ ರಕ್ಷಣೆ ಕೊಡುವ ಹಾಗಿಲ್ಲ. ಹಾಗಾದರೆ ನಾವು ಹೊರಟು ಹೋಗುತ್ತೇವೆ.

(ಮಾನ್ಯ ಸದಸ್ಯರಾದ ರಾಮಪ್ಪನವರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಭಾಧ್ಯಕ್ಷರೆ, ಈ ದೀನದಲಿತರ ಮೇಲೆ ಎಸ್.ಸಿ, ಯವರ ಮೇಲೆ ಅನೇಕ ದೌರ್ಜನ್ಯಗಳು ಆಗುತ್ತಿವೆ ಎನ್ನುವಂಥ ವಿಷಯವನ್ನು ಹಿಂದೆ ಎರಡೂ ಕಡೆಯ ಸದಸ್ಯರು ಈ ಸದನದ ಗಮನಕ್ಕೆ ತಂದಿದ್ದರು. ಅಂದು ಆದ ಚರ್ಚೆಯನ್ನು ಗಮನಿಸಿ ಸರ್ಕಾರದವರು ಈ ಸದನದ ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಗೆ ಬಹಳ ಅನುಭವವುಳ್ಳಂಥ ಡಾ. ತಿಪ್ಪೇಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆ ಸಮಿತಿಯವರು ಎಲ್ಲಾ ಕಡೆಗಳಲ್ಲೂ ಹೋಗಿ ಅಲ್ಲಿ ನಿರತಕ್ಕಂಥ ಸಾಕ್ಷಿ ಆಧಾರಗಳನ್ನು ಗಮನಿಸಿ ನಿಜವಾದಂಥ ಸಂಗತಿಗಳು ಏನು ಎನ್ನುವುದನ್ನು ತಿಳಿದು ಸ್ಪಷ್ಟವಾದ ವ್ಯಾಖ್ಯಾನವನ್ನು ಮಾಡಿದ್ದಾರೆ. ನಿಜ, ಈಗ ಚರ್ಚೆಯಾಗುವಾಗ ಅನೇಕ ಬಿಸಿ ಬಿಸಿ ಮಾತುಗಳು ಬಂದುವು. ದುರ್ದೈವದಿಂದ ಈ ಬಿಸಿ ವಾತಾವರಣವನ್ನು ಉಂಟು ಮಾಡಿದಾಗ ನಿಜವಾದ ಮರ್ಮವನ್ನು ಅರಿತುಕೊಳ್ಳಲಿಕ್ಕೆ ಅವಕಾಶ ಸಿಗದ ಹಾಗೆ ಆಗುತ್ತದೆ. ನಾನು ಇಷ್ಟೇ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇವತ್ತು ಈ ಸರ್ಕಾರವನ್ನು ಟೀಕೆ ಮಾಡುವುದು ಒಂದೇ ನಮ್ಮ ಉದ್ದೇಶವಲ್ಲ, ಈ ಸರ್ಕಾರ ನಿಜವಾಗಿಯೂ ಜನತೆಗೆ ಇನ್ನೂ ಹೆಚ್ಚಿನ ಸೇವೆಯನ್ನು ಮಾಡಬೇಕು, ಪರಿಶಿಷ್ಟ ವರ್ಗಕ್ಕಾಗಲಿ, ಎಸ್.ಸಿ.ನವರ ಬಗ್ಗೆಯಾಗಲಿ ಇನ್ನೂ ಹೆಚ್ಚು ಹೆಚ್ಚು ಗಮನವನ್ನು ಹರಿಸಿ ಅವರ ರಕ್ಷಣೆಗೆ ಬರಬೇಕು ಎನ್ನುವುದಂ ನಮ್ಮ ಅಭಿಪ್ರಾಯ. ಸರ್ಕಾರ ಯಾರ ಸಲುವಾಗಿ ಇರುತ್ತದೆ ಎಂದರೆ ಯಾರು ದೀನದಲಿತರು, ಅಬಲರು ಇರುತ್ತಾರೆ ಆ ಅಬಲರಿಗೆ ರಕ್ಷಣೆ ಕೊಡುವುದೇ ಸರ್ಕಾರದ ಮುಂಖ್ಯ ಕರ್ತವ್ಯ. ಅವನು ಯಾವ ಜಾತಿಯಲ್ಲಿ ಹುಟ್ಟಿರಲಿ ಆ ಅಬಲರಿಗೆ ರಕ್ಷಣೆ ಕೊಡದೇ ಇದ್ದರೆ ಆ ಸರ್ಕಾರ, ಸರ್ಕಾರ ಅನ್ನಿಸಿಕೊಳ್ಳುವುದಕ್ಕೆ ಸಹಿತ ಲಾಯಕ್ಕು ಇಲ್ಲ. ಇವತ್ತಿನ ದಿವಸ ಎಲ್ಲವನ್ನು ಸರ್ಕಾರದ ಮೇಲಾಗಲಿ, ಮುಖ್ಯಮಂತ್ರಿಗಳ ಆಫಿಸಾ ಹೋಂ ಮಿನಿಸ್ಟರ್ ಮೇಲೆ ಹಾಕಲಿಕ್ಕೆ ಆಗುವುದಿಲ್ಲ. ಆದರೆ ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಇವತ್ತು ಈ ಅಧಿಕಾರಿ ವರ್ಗ ಏನಿದೆ ಈ ಅಧಿಕಾರಿ ವರ್ಗ ಸರ್ಕಾರವನ್ನೂ ಸಹ ತಿರಸ್ಕರಿಸಿ, ತಮ್ಮ ಹೊಟ್ಟೆ, ತಮ್ಮ ಜೇಬನ್ನು ತುಂಬಿಕೊಳ್ಳುವ ದೃಷ್ಟಿಯಿಂದ ಹಿತಾಹಿತಗಳನ್ನು ಗಮನಿಸದೆ, ಸಾರ್ವಜನಿಕ ಹಿತವನ್ನೂ ಸಹ ದುರ್ಲಕ್ಷಿಸಿದಷ್ಟು ಪ್ರವೃತ್ತಿಗೆ ಈಡಾಗಿ ಅನೇಕ ಘಟನೆಗಳನ್ನು ಮಾಡುತ್ತಾ ಇದ್ದಾರೆ. ಹಿಂದೆ ಶ್ರೀವಾನ್ ಲಾಲ್ ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆ ಕೊಟ್ಟರು. ಗಾಡಿ ಬಿದ್ದಾಗ, ಆಂದಾಗ ಅವರು ಗಾಡಿಯನ್ನು ನಡೆಸಲಿಕ್ಕೆ ಹೋಗಿದ್ದಾರೆ ಏನು? ಏನಿಲ್ಲ, ಆದರೂ ರಾಜೀನಾಮೆ ಕೊಟ್ಟರು. ಆಗಿನ ವಾತಾವರಣ ಬೇರೆ ಇತ್ತು. ಈಗ ವಾತಾವರಣ ಬೇರೆ ಇದೆ. ಆಗ ಅವರು ವಿರೋಧಪಕ್ಷದಲ್ಲಿದ್ದರು. ಈಗ ನಾವು ಇಲ್ಲಿ ವಿರೋಧಪಕ್ಷದಲ್ಲಿದ್ದೇವೆ. ಆದರೆ ನಾನು ಹೇಳುವುದಿಷ್ಟೆ. ಯಾವುದರ ಸಲುವಾಗಿ ಅವರು ರಾಜೀನಾಮೆ ಕೊಟ್ಟರು ಎನ್ನುವಂಥ ತತ್ವವನ್ನು ಪರಿಶೀಲನೆ ಮಾಡಬೇಕು. ಶ್ರೀ ಕಿದ್ವಾಯಿಯವರು ರಾಜಿನಾಮೆ ಕೊಡುವಂಥ ಪ್ರಸಂಗ ಏಕೆ ಬಂತು, ಉಪವಾಸ ಏಕೆ ಬಿದ್ದರು ಎನ್ನುವಂಥ ತತ್ವದ ಕಡೆಗೆ ಗಮನವನ್ನು ಹರಿಸಿದರೆ ಈ ಅಧಿಕಾರಿಗಳಿಗೆ ಒಂದು ಬೆದರಿಕೆಯನ್ನು ಹಾಕುವ ಸಲುವಾಗಿ ಅವರು ರಾಜೀನಾಮೆ ಕೊಟ್ಟರು ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಅವತ್ತು ಒಬ್ಬ ಪೇದೆ ಮಲ ತಿನ್ನಿಸಿದ, ಅವನಿಗೆ ಮತ್ತು ಒಬ್ಬ ಮಾಸ್ಟರಿಗೆ ಶಿಕ್ಷೆ ಮಾಡಬೇಕು. ಅವರಿಗೆ ಶಿಕ್ಷೆ ಮಾಡಿರಿ, ಇದರ ಜೊತೆಗೆ ಡೆಪ್ಯೂಟಿ ಕಮಿಷನರ್ ಆಗಲಿ, ಡಿವಿಜನಲ್ ಕಮಿಷನರ್ ಆಗಲಿ ಮತ್ತು ಇನ್ನಿತರ ಡಿ.ಎಸ್.ಪಿ. ಯವರಾಗಲಿ ಯಾವ ಕೆಲಸವನ್ನು ಮಾಡಿದರು ಎನ್ನುವುದನ್ನು ಇವತ್ತು ಗಮನಿಸಬೇಕಾಗುತ್ತದೆ. ಈ